ಸಣ್ಣ ಪ್ರಮಾಣದ ಪತ್ರಿಕಾ ನೌಕರರ ಬಗ್ಗೆ

582. ಶ್ರೀ. ಪೌಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೃತ್ತಿ ತೆರಿಗೆ ಕೊಡುವ ಬಗ್ಗೆ ರಿಯಾಯಿತಿ ಕೋರಿ ಸಣ್ಣ ಪ್ರಮಾಣದ ಪ್ರತಿಕಾ ನೌಕರರು ಮನವಿ ಮಾಡಿದ್ದಾರೆಯೇ?

ಆ) ಹಾಗಿದ್ದಲ್ಲಿ, ಈ ನೌಕರರಿಗೆ ವೃತ್ತಿ ತೆರಿಗೆ ನೀಡುವುದರಿಂದ ವಿನಾಯಿತಿ ನೀಡಲು ಸರ್ಕಾರವು ತೀರ್ಮಾನಿಸಿದೆಯೇ?

ಶ್ರೀ. ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಎಂ.ಬಿ. ಸಿಂಗ್ ವರದಿ ಬಗ್ಗೆ

581. ಶ್ರೀ. ಪೌಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಪತ್ರಿಕೆಗಳಿಗೆ ಅನುಕೂಲವಾಗುವಂತೆ ಶ್ರೀ ಎಂ.ಬಿ. ಸಿಂಗ್ ಸಮಿತಿಯ ವರದಿಯನ್ನು ಜಾರಿಗೊಳಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಎಂ.ಬಿ. ಸಿಂಗ್ ವರದಿಯನ್ನು ಜಾರಿಗೊಳಿಸುವ ಬಗೆಗೆ ಪ್ರಸ್ತಾವನೆಯಿದೆಯೇ?

ಶ್ರೀ. ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಭಾಗಶ: ವರದಿಯನ್ನು ಜಾರಿಗೊಳಿಸಲಾಗಿದೆ.

ಆ) ಭಾಗಶ: ವರದಿಯನ್ನು ಜಾರಿಗೊಳಿಸಲಾಗಿದ್ದು ಸಮಿತಿಯ ಉಳಿದ ಶಿಫಾರಸ್ಸುಗಳನ್ನು ಹಣಕಾಸಿನ ಹಿನ್ನೆಲೆಯಲ್ಲಿ ಹಂತಹಂತವಾಗಿ ಪರಿಶೀಲಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ವಿದ್ಯಾರ್ಥಿನಿಲಯಗಳ ಬಗ್ಗೆ

490. ಶ್ರೀ. ಪೌಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 1990ರ ಅಕ್ಟೋಬರ್ ತನಕ ನಡೆಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳೆಷ್ಟು (ಸರ್ಕಾರಿ ಮತ್ತು ಅನುದಾನಿತ ವಿದ್ಯಾರ್ಥಿನಿಲಯಗಳ ವಿವರಗಳನ್ನು ಒದಗಿಸುವುದು)

ಆ) ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಖಾಸಗಿ ವಿದ್ಯಾರ್ಥಿನಿಲಯಗಳ ಹೆಸರು;

ಇ) ಬೆಂಗಳೂರಿನಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿ ಅನುಧಾನವನ್ನು ಪಡೆಯುತ್ತಿರುವ ನಿಲಯಾರ್ಥಿಗಳ ಸಂಖ್ಯೆ ಎಷ್ಟು?

ಈ) ಈ ವಸತಿನಿಲಯಗಳ ನಿರ್ವಹಣೆಗಾಗಿ 90–91ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣವೆಷ್ಟು;

ಉ) ಈವರೆಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನೀಲಯಗಳು:–

ರಾಜಾಜಿನಗರ, ಗಂಗೇನಹಳ್ಳಿ, ಬಸವೇಶ್ವರ ನಗರ, ಜಯನಗರ (ಬಾಲಕಿಯರ), ಹೆಬ್ಬಾಳು, ಕೆಂಗೇರಿ ವೈಟ್ ಫೀಲ್ಡ್, ಜಾಲಹಳ್ಳಿ ಹಾಗೂ ದೇವಸಂದ್ರಗಳಲ್ಲಿ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:–

ವಿಜಯನಗರ, ಗಂಗೇನಹಳ್ಳಿ, ಬಾಪೂಜಿನಗರ, ಹಾಗೂ ವಸಂತನಗರ (ಬಾಲಕಿಯರ)ಗಳಲ್ಲಿ.

ಒಟ್ಟು:– ಮೆಟ್ರಿಕ್ ಪೂರ್ವ 9 ವಿದ್ಯಾರ್ಥಿನಿಲಯಗಳು

ಮೆಟ್ರಿಕ್ ನಂತರದ 4 ವಿದ್ಯಾರ್ಥಿನಿಲಯಗಳು

ಖಾಸಗಿ ವಿದ್ಯಾರ್ಥಿನಿಲಯಗಳು:–

ಶ್ರೀ. ವಿಶ್ವೇಶ್ವರಸ್ವಾಮಿ ವಿದ್ಯಾಪೀಠ ಎಜುಕೇಷನಲ್ ಸೊಸೈಟಿ ಹಾಸ್ಟೆಲ್ ಸೂಲಿಗೆರೆ, ಬೆಂಗಳೂರು ದಕ್ಷಿಣ.

ಆ) ಶ್ರೀ. ವಿಶ್ವೇಶ್ವರಸ್ವಾಮಿ ವಿದ್ಯಾಪೀಠ ಎಜುಕೇಷನಲ್ ಸೊಸೈಟಿ ಹಾಸ್ಟೆಲ್ ಸೂಲಿಗೆರೆ, ಬೆಂಗಳೂರು ದಕ್ಷಿಣ.

ಇ)	ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ	666
	ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ	50
	ಒಟ್ಟು ನಿಲಯಾರ್ಥಿಗಳು	716

ಈ) 41.00 ಲಕ್ಷ ರೂ.ಗಳು

ಉ) 14.54 ಲಕ್ಷ ರೂ.ಗಳು.

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ನೇಮಕಾತಿ ಮಾಡುವಾಗ ಲೋಪದೋಷಗಳಾಗಿರುವ ಬಗ್ಗೆ

624. ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ನೇಮಕ ಮಾಡುವಾಗ ಬಹಳಷ್ಟು ಲೋಪದೋಷಗಳಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನು?

ಶ್ರೀ. ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):–

ಅ) ಬಂದಿದೆ.

ಆ) ನಿಗಮದ ಕಾರ್ಯದರ್ಶಿಗಳನ್ನು ದಿನಾಂಕ 12–5–89ರಂದು ಅಮಾನತ್ತಿನಲ್ಲಿರಿಸಿ ಅವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದೆ.

ವೈಸ್ ಛೇರ್ಮನ್ : ಮಂಡಿಸಲಾಯಿತು.